## ಕನ್ನಡ ಕಲಾಕೃತಿ

ಕುಂದಾನಗರಿ ಅಂತಲೇ ಪ್ರಸಿದ್ಧವಾದ ಬೆಳಗಾವಿಯ ಸದಾಶಿವ ನಗರದಲ್ಲಿರುವ, ಆರ್ಯನ್ ಶಾಲೆಯ ಮುಂಭಾಗದಲ್ಲಿ ಈ ಕಲಾಕೃತಿಯನ್ನು ಇಡಲಾಗಿದೆ. ಶಾಲೆಯ ಮುಂಭಾಗದಲ್ಲಿ ಈ ರೀತಿ ಪೆನ್ಸಿಲ್, ಪುಸ್ತಕ ನಿರ್ಮಿಸಿ ಕನ್ನಡ ಅಕ್ಷರವನ್ನು ಕಾಣುವಂತೆ ಮಾಡಲಾಗಿದೆ. ನೋಡಲು ಚೆಂದವಾಗಿ ಕಾಣುತ್ತಿದೆ. ಮಕ್ಕಳಲ್ಲಿ ಮಾತೃ ಭಾಷೆ ಅಭಿಮಾನ ಮೂಡಲು ಹಾಗೂ ಕಲಿಯಲು ಇಂತಹ ಕಲಾಕೃತಿಗಳು ಸಹಕಾರಿಯಾಗಿವೆ.

—ರೇಖಾನಾಯಕ ಡೊಳ್ಳಿನ, ಕೊಪ್ಪಳ



## ಧರ್ಮಸ್ಥಳವಲ್ಲ ದಾವಣಗೆರೆ ಮಂಟಪ

ಈ ಚಿತ್ರದಲ್ಲಿ ಕಾಣುತ್ತಿರುವ ಈ ಬೃಹದಾಕೃತಿಯ ರಚನೆ ನೋಡಿ, ಇದು ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿಯ ಸನ್ನಿಧಿ ಎಂಬ ನಿರ್ಧಾರಕ್ಕೆ ಬಾರದಿರಿ. ಈಚೆಗೆ ನಡೆದ ಗಣೇಶೋತ್ಸವ ಅಂಗವಾಗಿ ದಾವಣಗೆರೆಯ ಹಿಂದೂ ಮಹಾಸಭಾ ಟ್ರಸ್ಟ್ ವತಿಯಿಂದ ಅಲ್ಲಿನ ಹೈಸ್ಕೂಲ್ ಮೈದಾನವೊಂದರಲ್ಲಿ 45 ಅಡಿ ಎತ್ತರ, 170 ಅಡಿ ಅಗಲ ಹಾಗೂ 130 ಅಡಿ ಉದ್ದ ವಿಸ್ತೀರ್ಣದ ಧರ್ಮಸ್ಥಳ ಮಂಜುನಾಥ ಸ್ವಾಮಿಯ ದೇಗುಲವನ್ನು ಧರೆಗಿಳಿಸಲಾಗಿತ್ತು. ಕೋಲ್ಕತ್ತದ 40 ಮಂದಿ ನುರಿತ ಕಲಾವಿದರು ಈ ಮಹಾ ಮಂಟಪವನ್ನು ನಿರ್ಮಿಸಿದವರು. ಈ ಮಂಟಪದೊಳಗೆ 15 ಅಡಿ ಎತ್ತರದ ಮಣ್ಣಿನ ಗಣಪತಿ ಹಾಗೂ 10 ಅಡಿ ಎತ್ತರದ ಶ್ರೀ ಮಂಜುನಾಥ ಸ್ವಾಮಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಇದು ಸಾರ್ವಜನಿಕರನ್ನು ಸೂಜಿಗಲ್ಲಿನಂತೆ ಸೆಳೆದಿತ್ತು!

—ಜಿ.ರಾಜಣ್ಣ, ದಾವಣಗೆರೆ





## ಅಂಜನಿಪುತ್ರನನ್ನು ರಕ್ಷಿಸಿ

ಕೊಪ್ಪಳ ಜಿಲ್ಲೆಯ ಮದಲಗಟ್ಟಿ ಗ್ರಾಮದಲ್ಲಿನ ಪ್ರಖ್ಯಾತ ಪ್ರಾಣದೇವರ ದೇವಾಲಯ ತನ್ನ ಮಹಿಮೆಯಿಂದ ಜನ ಸಾಗರವನ್ನು ಆಕರ್ಷಿಸುತ್ತಿದೆ. ಆದರೆ ಮುಜರಾಯಿ ಇಲಾಖೆಯವರ ಬೇಜವಾಬ್ದಾರಿಯಿಂದ ಹಲವು ಸುಂದರ ವಿಗ್ರಹ ಹಾಗೂ ಪಳೆಯುಳಿಕೆಗಳು ಹೊರಬದಿ ಅನಾಥವಾಗಿ ಬಿಸಿಲು, ಮಳೆಗೆ ಮೈಯೊಡ್ಡಿ ಬಿದ್ದಿವೆ. ಅಂತಹ ಒಂದು ಅಂಜನಿಪುತ್ರನ ವಿಗ್ರಹವಿದು.

—ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ. ಜೊತೆಗೊಂದು ಚೆಂದದ ಚಿತ್ರ ಇರಲೇಬೇಕು.

ಇಮೇಲ್ ವಿಳಾಸ

**editorsu@sudha.co.in**